ತಾರೀಖು 21ನೇ ಮಾಹೆ ಜನವರಿ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಾತಗೋಡಿ ಪ್ಯಾಟೇರ್ಷನಲ್ಲಿ ಕಡಿಸಿ ಟಾಟುಮಾಡಿಸಿ ಯಿರುವ ಸುಮಾರ್ 300 ಗಾಡಿ ಕ್ಯಾನರಿನಾ ಸವುದೆಯನ್ನು 1889ನೇ ಇಸವಿ ಫಿಬ್ರವರಿ ಮಾಹೆ 10ನೇ ತಾರೀಖು ಭಾನುವಾರ ಪ್ರಾತಃಕಾಲ 9 ಘಂಟೆಗೆ ಸುರುವಾಗಿ ಬಹಿರಂಗವಾಗಿ ಹರಾಜು ಮಾಡಿಸಲಾಗುತ್ತೆ. ಖರೀದಿಗೆ ತೆಗದುಕೊಳ್ಳಲು ಇರಾದೆಯುಳ್ಳವರೆಲ್ಲರೂ ಸದರಿ ಪ್ಯಾಟೇರ್ಷನಲ್ಲಿ ಆ ಕಾಲಕ್ಕೆ ಬಂದು ಧಾರಾಳವಾಗಿ ಸವಾಲ್ ಮಾಡಬಹುದು, ಆಬೈರ್ ಸವಾಲದಾರನು ಹರಾಜು ಕೈದಾದಕೂಡ್ಲೆ ಪೂರಾ ಮೊಬಲಗನ್ನು ನಗದಾಗಿ ಪಾವತಿ ಮಾಡಬೇಕು.

ಎಸ್. ಎ. ಬಾಪೂರಾವ,
ಸಬ್ ಅಸಿಸ್ಟೆಂಟ್ ಕಮಿಸರವೇಟರ್ ಫಾರೆಸ್ಟ್.

ನೋಟಿಫಿಕೇರ್ಷ.

1889ನೇ ಇಸವಿ ಜನವರಿ 23ನೇ ಮಾಹೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—1878ನೇ ಇಸವಿ ಜೂನ್ 8ನೇ ಮಕ್ಕಂ 13ನೇ ರೂಲ್ ಅನುಸರಿಸಿ ಕೆಳಗೆ ನಮೂದಿಸಿರುವ ಸ್ಟೇಟ್ ಫಾರೆಸ್ಟುಗಳು ಪ್ಯಾಟೇರ್ಷಗಳು ಬರುವ ಬಿಸಲ್‌ಕಾಲ ಅಂದರೆ 1889ನೇ ಇಸವಿ ಫಿಬ್ರವರಿ ಗುರ್ರೇಲಾಗಾಯತು 1889ನೇ ಇಸವಿ ಮೇ ಆಕ್ಕೈರು ವರಿಗೂ ಮುಚ್ಚಲ್ಪಟ್ಟಿರುತ್ತೆ. ಬೇಟಿಗಾರರು ಮತ್ತು ಇತರರು ಈ ಫಾರೆಸ್ಟು ಮತ್ತು ಪ್ಲಾಂಟೇರ್ಷಗಳಲ್ಲಿ ಪ್ರವೇಸಿಸಲು ಅಡ್ಡೀ ಮಾಡಲ್ಪಟ್ಟಿರುತ್ತಾರೆ, ಅವಶ್ಯಕವಾಗಿ ಯಾರಾದರೂ ಬಂದುನೇಳೆ ಪ್ರವೇಶ ಮಾಡಬೇಕಾದ ಸಂದರ್ಭದಲ್ಲಿ ಫಾರೆಸ್ಟು ಅಸಿಸ್ಟೆಂಟ್ ಕಮಿಸರವೇಟರ ಸ್ಪೆಷಲ್ ಆಪ್ಪಣೆಯನ್ನು ಪಡಿಯಬೇಕು:—

ನಂಬರ್.	ಫಾರೆಸ್ಟು ಮತ್ತು ಪ್ಲಾಂಟೇರ್ಷ ಹೆಸರು.	ತಾಲ್ಲೂಕು.
1	ಬನವನ ಟ್ಟಿ	ಮಳವಳ್ಳಿ
2	ಚೀಲಂದಾಡಿ	ಕಾರ್ಕಾರಹಳ್ಳಿ
3	ಬಿಳಿಕಲ್	ಡಿಟೋ
4	ಕಬ್ಬಾಳದುರ್ಗ	ಡಿಟೋ
5	ರಾಗಿಹಳ್ಳಿ	ಡಿಟೋ
6	ಮುಗ್ಗೂರು	ಡಿಟೋ
7	ಬಾಣಂತಿಮಾರಿ	ಡಿಟೋ
8	ಹಂದಿಗುಂದಿ ಮತ್ತು ಅಚ್ಚಲು ..	ಕೃಷ್ಣರಾಜಪೇಟೆ
9	ಮಣ್ಣುಗುಚ್ಚಿ	ಡಿಟೋ
10	ಮಾಕಳಿ	ಡಿಟೋ
11	ಹುಲತಾರ	ಡಿಟೋ
12	ಕುಂಬಳಗೂಡು	ಡಿಟೋ
13	ನರಸಿಹ್ಮದೇವರಬೆಟ್ಟ	ಡಿಟೋ
14	ತೆಂಗಿನಕಲ್ಲು	ಡಿಟೋ
15	ಸಾವಂದುರ್ಗ	ಮಾಗಡಿ
16	ದೊಡಬಳ್ಳಾಪುರ	ದೊಡ್ಡಬಳ್ಳಾಪುರ
17	ಅರಕಾವತಿ	ನೆಲಮಂಗಲ
18	ದೊಡ್ಡಬೆಲೆ	ಡಿಟೋ
19	ವೃಷಭಾವತಿ	ಬೆಂಗಳೂರು

ಸಿ. ನಾರಾಯಣರಾವ,
ಫಾರೆಸ್ಟು ಅಸಿಸ್ಟೆಂಟ್ ಕಮಿಸರವೇಟರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 22ನೇ ಜನವರಿ 1889.

ತುಮಕೂರ ಡಿಸ್ಟ್ರಿಕ್ಟು ಚಿಕ್ಕನಾಯಕನಹಳ್ಳಿ ಸಬ್ ರಜಿಸ್ಟ್ರಾರ ಆಫೀಸಿನಲ್ಲಿ ಈ ಕೆಳಗೆ ವಿವರಿಸಿ ಇರುವ ದಸ್ತಾವೇಜು ಜೇವಾರಸುಗಿ ಇರುವದ್ದರಿಂದ ಈ ಇಸ್ತಿಹಾರ್ ತಾರೀಖು ಲಾಗಾಯತು 1 ತಿಂಗಳ ವಳಗಾಗಿ ಸಂಬಂಧಪಟ್ಟ ಕಕ್ಷಿಗಾರ್ರೇ ಆಗಲಿ ಅವರಿಂದ ಅಧಿಕಾರ ಹೊಂದಿದ ಮುತಾಲೀಕರೇ ಆಗಲಿ ಆ ಸಬ್ ರಜಿಸ್ಟ್ರಾರ್ರ ರೂಬರೂ ಹಾಜರಾಗಿ ವಾಗ್ದಸ್ ತೆಗದುಕೊಳ್ಳದೆ ತಪ್ಪಿದಲ್ಲಿ ಇಂಡಿಯನ್ ರಜಿಸ್ಟ್ರೇರ್ಷ ಆಕ್ಟಿನ 85ನೇ ಸೆಕ್ಷರ್ಷ ಪ್ರಕಾರ ನಾಕಪಡಿಸಲ್ಪಡುತ್ತೆ.

ರೆಜಿಸ್ಟರ್ ನಂಬರ್.	ದಸ್ತಾವೇಜನ್ನು ಬರೆದು ಕೊಟ್ಟವರ ಹೆಸರು.	ದಸ್ತಾವೇಜನ್ನು ಬರಿಸಿ ಕೊಂಡವರ ಹೆಸರು.	ದಸ್ತಾವೇಜಿನ ತಾರೀಖು.	ರಜಿಸ್ಟರ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1886—87ನೇ ಇಸವಿ ನಂಬರ 39.	ತಾಲ್ಲೂಕು ಮಜಕೂರ ಚಿಕ್ಕ ಹದರೆ ಗ್ರಾಮದ ದಲ್ಲಿ ಇರುವ ಪಾಸುಪಟ್ಟಿಗ ರಾಮಯ್ಯನವರ ಮಗ ವೆಂಕಪ್ಪ	ತಾಲ್ಲೂಕು ಮಜಕೂರ ಸಾಲಿಗ್ರಾಮದ ದಲ್ಲಿ ಇರುವ ಪಟೇಲ್ ನಂಜೇಗೌಡ	1886ನೇ ಇಸವಿ ಜುಲೈ ೨೦	1886ನೇ ಇಸವಿ ಜುಲೈ ೨೦	ತಾಲ್ಲೂಕು ಮಜಕೂರ ತಾರೇಕಟ್ಟೆ ಗ್ರಾಮದಲ್ಲಿ ಸರ್ವೆ 36ನೇ ನಂಬರ ಖುಷ್ಕಿ ಎಕರೆ 2—8—0 ಆಕಾರ 1-4-0 ಬಾಗಾಯತು ಎಕರೆ 6—39-0 ಆಕಾರ 29—12—0 ನಂಬರ 11ನೇ ತರೀ ಎಕರೆ 2—28—0 ಆಕಾರ 8—0—0 ಖುಷ್ಕಿ ಎಕರೆ 39 ಆಕಾರ 0—೮—0 ಈ ಜಮೀನುಗಳ ಬಂದು 100 ರೂಪಾಯಿನ ಕ್ರಯಪತ್ರ.

ಪಿ. ಎಸ್. ಕೃಷ್ಣಮೂರ್ತಿ,
ರಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ 1.

ಮೃತಪಟ್ಟ ಗೊರೂರು ರಾಮಸ್ವಾಮಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಯದುಗಿರಿಯಮ್ಮನವರು ಮೃತಪಟ್ಟ ಸದರೀ ರಾಮಸ್ವಾಮಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಟಣದ ಹಾ॥ ಮೇಲುಕೋಟೆ ಸ್ಥಳದ ಸದರೀ ಯದುಗಿರಿಯಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಯದುಗಿರಿಯಮ್ಮನವರ ಅರ್ಜೀಯನ್ನು 1889ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುವಡಿಸಿ ಯಿಫೆ.

1889ನೇ ಇಸವಿ ಅರ್ಜೀ ನಂಬರ 2.

ಮೃತಪಟ್ಟ ಬೋರೇಗವ್ವಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಬೋರೇಗವ್ವಡ 2ನೇ ಮುರಿಗವ್ವಡ ಸಹ ಮೃತಪಟ್ಟ ಸದರೀ ಬೋರೇಗವ್ವಡರಿಗೆ ಮುಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ವೀರಣಗೆರೆ ಸ್ಥಳದ ಸದರೀ 1—2ನೇ ಅರ್ಜೀದಾರರು ಸದರೀ ವಾಸಸ್ಥರಾಗಿ ಮೃತಪಟ್ಟ ಬೋರೇಗವ್ವಡರ ಜಿಂದಗೀ ಬಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬೋರೇಗವ್ವಡ, ಮುರಿಗವ್ವಡರ ಅರ್ಜಿಯನ್ನು 1889ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೋರೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜನವರಿ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಃ ಸಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್, ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಸೇದಾರ ಮೈಸೂರು ಸಂತೆ ಪೇಟೆಲಿರುವ ಅಡಿಕೆ ಮಳಿಗೆ ಮರಡಪ್ಪನ ವಿಷಯದಲ್ಲಿ—

ಸ್ ೧೮೮೮ನೇ ಇಸವಿ ದಿವಾಳಿ ಕೇಸ್ ನಂಬರ 135.

ಹುಕುಂ

ಮೇಲ್ಕಂಡ ಅಡಿಕೆ ಅಂಗಡಿ ಮರಡಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಮರಡಪ್ಪನ ಪರವಾಗಿ ಅಡ್ವೋಕೆಟ್ ವೆಂ॥ ರಾಜಾರಾಯರನ್ನೂ ಮತ್ತು ಸದರೀಯವನ ಲೇಕ್ಕದಾರ್ರಾದ 2ನೇ ನಾಗಕೂಮಾರಯ್ಯ, 3ನೇ ತಮ್ಮಯ್ಯ, 4ನೇ ಚನ್ನಪ್ಪ 14ನೇ ಲಕ್ಷ್ಮಿನರಸಿಂಹ್ಮ, ಬ್ಯಾಂಕ್ 15ನೇ ಲೈಫ್ ಇನ್ಷ್ಯೂರೆನ್ಸ್, 16ನೇ ಯಶೋರಾಜ ಸಂಪತ್ತುವಾರ ಬ್ಯಾಂಕ್, 17ನೇ ತಿರುಮಲಾಚಾರ್ ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಹೊಟ್ಟೆಪ್ಪ 4ನೇ ಕೆಂಪಣ್ಣ, 5ನೇ ಹಯಾತಬಿ 7ನೇ ತಿಮ್ಮೇಗೌಡ 8ನೇ ನರಸಿಂಹ್ಯಯ್ಯ, 9ನೇ ಪುಟ್ಟಲಕ್ಷ್ಮಿ, 10ನೇ ಸರ್ವಜನವೃದ್ಧಿಬ್ಯಾಂಕ್, 11ನೇ ವೆಂಕಟರಮಣಪ್ಪ, 12ನೇ ಹುಚ್ಚೀರಪ್ಪ, 13ನೇ ಲಕ್ಷ್ಮಮ್ಮ, 18ನೇ ತಿಮ್ಮಮ್ಮ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅಡಿಕೇ ಮಳಿಗೇ ಮುರಡಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1889ನೇ ಇಸವಿ ಜನವರಿ 16ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮದಸ್ತಖತ್‌ನಿಶಿ ಕೊಡಲ್ಪಟ್ಟತು.

ಸಾಲದಪಟ್ಟಿ.

ನಂಬರು.	ಲೇಣೇದಾರು, ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೇ ಸ್ಥಾಪಿತವಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಸೂ.
17	ಮೈಸೂರು ಲೈಫ್ ಇನ್ ಷೂರೆನ್ಸ್ ಬ್ಯಾಂಕ್ ತಿರುಮಲಾಚಾರ್ರು	50		ಡಿಕ್ರೀ	

ದಿವಾಳಿಯಾದ ಡಿಕ್ರೀ ದೇಣೇದಾರ ನಂಜಿನಗೂಡು ತಾಲ್ಲೂಕು ಸರ್ವಮಾನ್ಯ ಅಳಗಂಜೀ ಗ್ರಾಮದಲ್ಲಿರುವ ಚಿದ್ದರಾಜಯ್ಯನ ವಿಷಯದಲ್ಲಿ—

ಸ್ನ 1888ನೇ ಇಸವಿ ದಿವಾಳೀ ಕೇಸ್ ನಂಬರು 206.

ಹುಕ್ಕುಂ.

ಮೇಲ್ಕಂಡ ಚಿದ್ದರಾಜಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಚಿದ್ದರಾಜಯ್ಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ವೆ॥ ನಾರಾಯಣರಾಯರನ್ನೂ ಮತ್ತು ಸದರೀಯತನ ಲೇಣೇದಾರ್ರಾದ 1ನೇ ಚಿಕ್ಕಲಿಂಗೇಗೌಡ 2ನೇ, ಮಾದ, 3ನೇ ವರ್ಧಮಾನಪಂಡಿತ, 5ನೇ ದೊಡ್ಡಣಯ್ಯ, 6ನೇ ಚಿಕ್ಕ, 7ನೇ ಲಿಂಗಾ, 8ನೇ ಸುಬ್ಬಯ್ಯ, 13ನೇ ಕೃಷ್ಣಕಟ್ಟ, 14ನೇ ಚಿನ್ನಮುನಿಸಾಮಿಶಟ್ಟ, 16ನೇ ದೊಡ್ಡಪ್ಪ, 17ನೇ ಚಿಕ್ಕೆಗೌಡ, ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—4ನೇ ಜವನ, 9ನೇ ಸುಬ್ಬಾಯ, 10ನೇ ಖಾಕಿಂಸಾಬಿ, 11ನೇ ಬಾಲಕೃಷ್ಣರಾವು, 12ನೇ ಶ್ರೀಕಂಠಯ್ಯ, 15ನೇ ರಾಮೇಗೌಡ,

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅಳಗಂಜಿ ಚಿದ್ದರಾಜಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಚನೆಮಾಡಿರುವದಲ್ಲದೆ ಇವಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1889ನೇ ಇಸವಿ ಜನವರಿ 11ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟತು.

ಸಾಲದಪಟ್ಟಿ.

ನಂಬರ್.	ಲೇಣೇದಾರು, ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೇ ಸ್ಥಾಪಿತವಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಯಿದ್ದರೆ.	ಸೂ.
1	ನಂಜಿನಗೂಡು ತಾಲ್ಲೂಕು ಅಳಗಂಜೀಲಿರುವ ಚಿಕ್ಕ ಲಿಂಗೇಗೌಡ	939 5 5	..	ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 10ನೇ ಜನವರಿ 1889.

ಚೆನ್ನಗಿರಿ ಸಬ್ ರಜಿಸ್ಟ್ರಾರ್ ಆಫಿಸಿನಲ್ಲಿ ಅದರ ಕೆಳಗೆ ನಮೂದಿಸಿ ಇರುವ ದಸ್ತಾವೇಜು ಬೇವಾರಸಾಗಿ ಯಿರುವದ್ದರಿಂದಲೂ ಕ್ರಮವಾದ ವಾರಸೆದಾರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕರಾಗಲಿ ಈ ತಾರೀಖು ಲಾಗಾಯತು ಎಂದು ತಿಂಗಳ ಒಳಗಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 9ನೇ ನಂಬರ್ ರಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರೆಗೆ ನಾಶಪಡಿಸಲ್ಪಡುತ್ತೆ.

ನಂಬರ್.	ದಸ್ತಾವೇಜನ್ನು ಬರದುಕೊಟ್ಟವನ ಹೆಸರು ಮತ್ತು ಅಡಿಸರ್ನ.	ದಸ್ತಾವೇಜನ್ನು ಬರಿಸಿಕೊಂಡವರ ಹೆಸರು ಮತ್ತು ಅಡಿಸರ್ನ.	ರಜಿಸ್ಟ್ರಿಗೆ ಹಾಜರಾದ ತಾರೀಖು.	ರಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
54 ——— 1885—86	ಉಬ್ರಾಣಿ ಮಾಗಣಿ ಬಗ್ಗಿ ಗ್ರಾಮದಲ್ಲಿರುವ ಹಲಗಯ್ಯನವಗ ರುದ್ರಂಣ	ಉಬ್ರಾಣಿ ಮಾಗಣಿ ಬಗ್ಗಿ ಗ್ರಾಮದಲ್ಲಿರುವ ಶಿದ್ದಬಸಪ್ಪನವಗ ಚಿಂದಪ್ಪ	27–1–86	27–1–86	ಬಗ್ಗಿ ಗ್ರಾಮದ ಸರ್ವೆನಂಬರ್ 4 ಯ ಕರೆ ೩–೪ ಆಕಾರ 6½ ಈ ಜಮೀನು 100 ರೂಪಾಯಿಗೆ ಕ್ರಯಪತ್ರ.

ತಾರೀಖು 10ನೇ ಜನವರಿ 1889.

ತೀರ್ಥಹಳ್ಳಿ ಸಬ್ ರಜಿಸ್ಟ್ರಾರ್ ಆಫಿಸಿನಲ್ಲಿ ಯಿದರ ಕೆಳಗೆ ನಮೂದಿಸಿ ಯಿರುವ ದಸ್ತಾವೇಜು ಬೇವಾರಸಾಗಿ ಯಿರುವದ್ದರಿಂದ ಕ್ರಮವಾದ ವಾರಸದಾರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕರಾಗಲಿ ಈ ತಾರಿಖು ಲಾಗಾಯತು ಒಂದು ತಿಂಗಳವಳಗಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರೆಗೆ ನಾಶಪಡಿಸಲ್ಪಡುತ್ತೆ.

ನಂಬರ್.	ದಸ್ತಾವೇಜನ್ನು ಬರದುಕೊಟ್ಟವರ ಹೆಸರು ಮತ್ತು ಅಡಿಸರ್ನ.	ದಸ್ತಾವೇಜನ್ನು ಬರಿಸಿ ಕೊಂಡವರ ಹೆಸರು ಮತ್ತು ಅಡಿಸರ್ನ.	ರಜಿಸ್ಟ್ರಿಗೆ ಹಾಜರಾದ ತಾರೀಖು.	ರಜಿಸ್ಟ್ರಾದ ತಾರೀಖು ಅಂದರೆ ಶರತ್ತು ಬರೆಸಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
2ನೇ ಬುಕ್ಕು 8 ——— 1885—86	ತಾಲ್ಲೂಕು ಮಜಕೂರು ಭದ್ರರಾಜಪುರ ಮಾಗಣಿ ಕೊಣಂದೂರು ಗ್ರಾಮದ ವಾಸಸ್ಥ ಭಾನುವಳ್ಳಿ ಕೊಲ್ಲೂರ್ ಭಟ್ಟರವಗ ನರಸಿಂಹ ಭಟ್ಟ	ತಾಲ್ಲೂಕು ಮಜಕೂರು ಭದ್ರರಾಜಪುರ ಮಾಗಣಿ ವಿರುಪಾಪುರ ಗ್ರಾಮದ ಗುಡ್ಡೆಪಾಲದ ಬಾ|| ವೇಳೂರು ಶಂಕರಭಟ್ಟರ ಮಗ ಕೊಲ್ಲಾಭಟ್ಟ	2 9 85	24 2 86	ಭದ್ರರಾಜಪುರ ಮಾಗಣಿ ಕೊಣಂದೂರು ಗ್ರಾಮದ ಬ್ರಂಹ್ಮದಾಯ ಸರ್ವೆ ನಂ. ಬಾಬತು ಯಕ್ಕ ಆಕಾರ 39 ತೋಟ ೦–೩೫ ೩ 47 ಡಿಟೋ ೦–೩೪ ೦೫ 52 ಡಿಟೋ ೦–೩೯ ೦೫ 77 ಡಿಟೋ ೦–೨೪ ೫½ ಈ ರೀತಿ ಯಿರುವ ನಂಬರು ೩೯–೩೩–೫೦ ಈ 3 ನಂಬರ್ಗಳ 2ರಲ್ಲಿ ೧ ಭಾಗ ನಂ. ೩೩ ರೂಪಾಯಿದನ್ನು ೧೦೦ ರೂಪಾಯಿಗೆ ಭೋಗ್ಯ ಮಾಡಿಯುವಂತೆ.

ಹೆಚ್. ಸಿ. ನಂಜುಂಡಯ್ಯ,
ಫಾರ್. ರಜಿಸ್ಟ್ರಾರ್.

ಕೊಡಗು ಫಾರೆಸ್ಟ್ ಇಲಾಖಾ.

ಸ್ರ 1889ನೇ ಇಸವಿ ಜನವರಿ ತಾರೀಖು 14ರಲ್ಲು.

ನೋಟಿಸ.

ಸ್ರ 1889ನೇ ಇಸವಿ ಫಿಬ್ರವರಿ ತಾರೀಖು 15ರಲ್ಲು ಹುಣಸೂರು ಡಿಪೋ ಬಾಬತು ಈ ಕೆಳಗೆ ನಮೂದು ಮಾಡಲ್ಪಟ್ಟ ತೊಲೆಗಳು ಹರಾಜು ಹಾಕಲ್ಪಡುತ್ತವೆ.

ತ್ಯಾಗದ ತೊಲೆ	ಸುಮಾರು	400	12000 ಸಲೆ ಅಡಿ.
ಹೊನ್ನೆ ವಗ್ಗೆರೆ	,,	500	13,000 ,,

ಕೆಲವು ಕುಯಿದ ತ್ಯಾಗದ ಮರದ ನಾವಾನು ಸಹ.

ಶರತ್ತು—ಸ್ರ 1885ನೇ ಇಸವಿ ಮೇ ತಾರೀಖು 16 ನಂಬರ 9ರ ಬಾಬತು ಕೊಡಗು ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನ್ ಮೇರೆ.

ಎಫ್. ಬಿ. ಡಿಕ್ರ್ಸನ್,
ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್.